

ಮನೆ ತುಂಬಾ ಬಾಲ್ಡ್ ಡ್ಯಾನ್ಸ್ ಮಾಡಿ ನಾಲ್ಕು ಬಾಟಲು ನೀರು ಗಟಗಟಿಸಿದ.

ಶ್ರೀಕಂಠೂ ಕೂಡಲೇ ಮಿನರಲ್ ವಾಟರ್ ಕ್ರೇಟ್‌ಗೆ ಆನ್‌ಲೈನ್‌ನಲ್ಲಿ ಆರ್ಡರಿಸಿ, ಬ್ರೆಡ್ಡು–ಬಟರ್ರು–ಜ್ಯಾಮ್ ಅಂಗಡಿಯನ್ನೇ ಮನೆಗೆ ತರಿಸಿಕೊಂಡು, 'ಇನ್ಮೇಲೆ ನೀನು ಕೈ ಬಾಯಿ ಸುಟ್ಕೊಂಡು ಮಾಡೋದು ಬೇಡ ಕಣೆ ಕಮ್ಲೂ, ನಿನ್ಮಗ ನಿನ್ ಕೆಲ್ಸ ಹಗುರ ಮಾಡಿದ್ದಾನೆ' ಎಂದು ಅನೌನ್ಸ್ ಮಾಡಿದ.

ಕಮ್ಲೂ, ಮಗನ ಮುಂದೆ ಬ್ರೆಡ್ ಒಣ ಟೋಸ್ಟ್ ಕುಕ್ಕಿದವಳೇ, ಘಮಘಮ ಎನ್ನುವ ಮಸಾಲೆದೋಸೆಯನ್ನು ಕಾವಲಿ ಮೇಲೆ ಹುಯ್ಯತೊಡಗಿದಳು. ಮನೆ ತುಂಬ ಆಲೂಗೆಡ್ಡೆ–ಈರುಳ್ಳಿ ಪಲ್ಯದ ಸುವಾಸನೆ ಇಟ್ಟಾಡಿತು. ಮಗನ ಹೊಟ್ಟೆ ಉರಿಸುವಂತೆ ಅವಳು, ಶ್ರೀಕಂಠೂ ಮುಂದೆ ಹೊಂಬಣ್ಣದ ದೋಸೆಯನ್ನು ಇಡಕ್ಕಿಲ್ಲ, ಅವನದನ್ನು ಮುರಿಮುರಿದು ಚಪ್ಪರಿಸಿ ತಿನ್ನೋ ಪರಿ ಕಂಡು ಅವಳಿಗೆ ಹೊಟ್ಟೆಯಿಂದುಕ್ಕುವ ನಗು!

ಮಗ ಉಪಾಹಾರದ ಮೆನು ಹೇಳೋಕೆ ಮುಂಚೆಯೇ ಅವನಿಗೆ ಒಂದು ವಾರ ಪೂರ್ತಿ ಒಣಬ್ರೆಡ್ಡೇ ಬ್ರೇಕ್‌ಫಾಸ್ಟು, ಊಟಕ್ಕೆ ಸುಕ್ಕಾ ಚಪಾತಿ, ಹಸುವಿನಂತೆ ಮೇಯಿ ಅಂತ ಹಸಿ ತರಕಾರಿಗಳ ಗುಡ್ಡೆ, ಸೂಪು, ಕೆಚಪ್ ಬಾಟಲುಗಳನ್ನು ತಂದು ಎದುರಿಗೆ ಜೋಡಿಸಿಟ್ಟಳು.

ಗಂಡ–ಹೆಂಡ್ತಿ ಮಾತ್ರ ತಂಪಾಡಿಗೆ ಇಡ್ಲಿ–ಚಟ್ನಿ, ಪೂರಿ–ಸಾಗು, ರವೇ ಭಾತು, ಹುಳಿ ಅವಲಕ್ಕಿ, ತಾಲೀಪಟ್ಟು, ನೀರುದೋಸೆ ಮಾಡಿಕೊಂಡು ಅದರ ಮೇಲೆ ತುಪ್ಪ ಸುರ್ಕೊಂಡು ಹೊಡೀತಿದ್ರೆ, ನಕುಲ ನೋಡಿಯೂ ನೋಡದವನ ಹಾಗಿದ್ರೂ, ಅವನ ಮೂಗಿನ ಹೊಳ್ಳೆಗಳು ಅರಳುತ್ತಿದ್ದುದನ್ನು ಕಮ್ಲೂ ಗಮನಿಸಿ ಗಂಡನತ್ತ ತಿರುಗಿ ಕಣ್ಣು ಮಿಟುಕಿಸಿದ್ದೇ ಮಿಟುಕಿಸಿದ್ದು.

ಹಬ್ಬದ ದಿನವೂ ಡಿಟ್ಟೋ ಡಿಟ್ಟೋ... ಕರಿದ ಶ್ಯಾವಿಗೆ ಪಾಯಸದ ಮೇಲೆ ಗಿಜಿಗುಡುತ್ತಿದ್ದ ದ್ರಾಕ್ಷಿ–ಗೋಡಂಬಿ ಚೂರುಗಳು, ಹೀರೇಕಾಯಿ ಬೋಂಡಾ, ಕಾಯಿ–ಸಾಸಿವೆ ಚಿತ್ರಾನ್ನ, ಮಜ್ಜಿಗೆ ಪಳದ್ಯ ಕಲೆಸಿ ಗಂಡ–ಹೆಂಡ್ತೀ ಲೊಟ್ಟೆ ಹೊಡೆಯುತ್ತಿದ್ದ ದೃಶ್ಯಾನ ನೋಡಲಾರದೆ ಮಗರಾಯ ಜಾಗ ಖಾಲಿ ಮಾಡಿದ್ದು ನೋಡಿ ಕಮ್ಲೂ ಹೊಟ್ಟೆ ಚುರ್ರೆಂದಿತು.

ಮಹಾ ನಾಲಗೆ ಚಪಲದ, ಅಡಾವುಡಿ ಒರಟು ಸ್ವಭಾವದ ನಕುಲನೇ ಇವನು ಅಂತ ಅಚ್ಚರಿ.

ಆ ದಿನ ಆಫೀಸಿನಿಂದ ಬಂದವನೇ ನಕುಲ, ಹಿಂದಿನಂತೆ ಕಮ್ಲೂ ಸೆರಗಿನ ತುದಿಯನ್ನು ಬೆರಳಿಗೆ ಸುತ್ತಿಕೊಳ್ಳುತ್ತಾ ಅಲವತ್ತುಕೊಂಡ.

'ಮಾಮ್... ನನ್ನ ಕಲೀಗ್ಸ್ ಟೆಕ್ಕಿಗಳೆಲ್ಲ ಒಂದೇ ಥರ... ಹಳ್ಳಿಮನೆ, ಹಟ್ಟಿ ಬುತ್ತಿ, ಮನೆ ಊಟ, ಅಜ್ಜಿಯ ಕೈತುತ್ತು, ಸ್ಟ್ರೀಟ್ ಫುಡ್ಡು ಹೀಗೆ, ಇನ್ನೂ ಏನೇನೋ ಹುಡ್ಕೊಂಡು ಹೋಗ್ತಾರೆ... ದೇ ಆರ್ ಆಲ್ ಕ್ರೇಜಿ... ಹೋಂ ಸಿಕ್ ಫೆಲೋಸ್... ಎಷ್ಟು ದೂರ ಆದ್ರೂ ಸರಿ ಗಲ್ಲಿ ಗಲ್ಲಿ ಹುಡ್ಕೊಂಡು ಹೋಗಿ, ಹೋಂ ಫುಡ್ ಎಂಜಾಯ್ ಮಾಡ್ತಾರೆ... ಐ ಕಾಂಟ್ ಅಂಡರ್‌ಸ್ಟಾಂಡ್ ದಿಸ್' ಎಂದು ಕನ್ಫ್ಯೂಸ್ ಮುಖಭಾವ ಮಾಡಿ, ತಲೆಯನ್ನು ಪರಪರ ಕೆರೆದುಕೊಂಡಾಗ, ಕಮ್ಲೂ ಮುಲಾಜಿಲ್ಲದೆ,

'ನೀನು ಕಣೋ ಕ್ರೇಜಿ, ಅವರಲ್ಲ... ಇದೇ ರುಚಿಕಟ್ಟಾದ ಆಹಾರ, ಅವರೇ ಕರೆಕ್ಟು. ಇದೇ ನ್ಯಾಚುರಲ್ ಕಣೋ' ಎಂದು ತುಟಿ ಸೊಟ್ಟ ಮಾಡಿದಾಗ ನಕುಲನ ಮುಖ ನೋಡಬೇಕಿತ್ತು.

ಅಮೆರಿಕದಿಂದ ಬಂದು ತಿಂಗಳು ಕಳೆದಿದ್ದರೂ ಅವನಿನ್ನೂ ಕಾವೇರಿ ನೀರು ಗುಟುಕರಿಸಿರಲಿಲ್ಲ. ಸೆರಾಮಿಕ್ ಪ್ಲೇಟು–ಸ್ಪೂನು–ಫೋರ್ಕು... ಹಿಂದಿನಂತೆ ಸ್ಟೀಲ್ ತಟ್ಟೇಲಿ ನೆಕ್ಕಿಕೊಂಡು ತಿಂದ ಮಜಾ ತೊಗೊಂಡಿರಲಿಲ್ಲ. ಇದನ್ನು ಕಂಡೂ ಕಾಣದ ಹಾಗೇ ಕಮ್ಲೂ–ಶ್ರೀಕಂಠೂ ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

ಭಾನುವಾರ, ಕಮ್ಲೂ ಬಾಣಲೆಯಲ್ಲಿ ಎಣ್ಣೆ ಇಟ್ಟು ಸೀಮೆಯಕ್ಕಿ ಮತ್ತು ಅರಳು ಸಂಡಿಗೆ ಕರಿಯುತ್ತ, ಉದ್ದಿನ ಹಪ್ಪಳದ ರುಚಿ ನೋಡ್ತಾ ಸುಖಿಸ್ತಿದ್ರೆ, ಹಿಂದಿನಿಂದ ಅನಾಮತ್ತು ಬಂದು ತಬ್ಬಿದ ಮಗರಾಯ, 'ಅಮ್ಮಾ' ಎಂದು ರಾಗ ಎಳೆದವನೇ, ಹಪ್ಪಳ–ಸಂಡಿಗೆಗೆ ಕೈಹಾಕಿ ತನ್ನ ಊಟದ ತಟ್ಟೆಗೆ ಬಡಿಸಿಕೊಂಡ.

ಕಮ್ಲೂ ಗಕ್ಕನೆ ತಿರುಗಿ ನೋಡ್ತಾಳೆ, ನಕುಲ ಸ್ಟೀಲ್ ತಟ್ಟೆ ತುಂಬಾ ಅನ್ನ ಹುಳಿ ಸುರ್ಕೊಂಡು ಕಲೆಸಿ ಸೊರಬುಸ ಶಬ್ದ ಮಾಡ್ಕೊಂಡು ತಿನ್ತಾ ಇದ್ದಾನೆ!

ಕಮ್ಲೂ–ಶ್ರೀಕಂಠೂ ಇಬ್ರೂ ಸ್ಟ್ಯಾಚ್ಯು!

ನಕುಲ ತನ್ನ ಪಾಡಿಗೆ ತಾನು ಸ್ಟೀಲ್ ತಟ್ಟೆಯನ್ನು ನೆಕ್ಕುತ್ತ ಪಕ್ಕಾ ಲೋಕಲ್ ಆಗ್ಬಿಟ್ಟಿದ್ದ!

ಪ್ರತಿಕ್ರಿಯಿಸಿ: **feedback@sudha.co.in**